5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆಃ ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5006/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಯಶೋದಾ | ಪ್ರಾಸಾಃ 7 |
| ಗಂಡನ ಹೆಸರು | : | ಆನಂದ ನಲ್ಕೆ | ಚಾಸಾಃ 10 |
| ಪ್ರಾಯ | : | 38 ವರ್ಷ | ದಿನಾಂಕಃ **22.08.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ದೊಂಪದಪಲ್ಕೆ ಮನೆ, ಕೊಡಂಬೆಟ್ಟು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಗಂಡ. ಮೃತ ಯಶವಂತ ನನ್ನ ತಮ್ಮ. ಸಂಬಂಧದಲ್ಲಿ ನನ್ನ ತಾಯಿಯ ತಂಗಿಯ ಗಂಡ. ಚಾಸಾ-1 ಮೃತ ಯಶವಂತನ ತಂದೆ. ಪ್ರಾಸಾ-3 ಮತ್ತು ಪ್ರಾಸಾ-4 ರವರ ಪರಿಚಯ ನನಗೆ ಇರುತ್ತದೆ. ನನ್ನ ತಮ್ಮ ಯಶವಂತನ ಕೊಲೆಯು 2019ರಲ್ಲಿ ಆಗಿರುತ್ತದೆ. ಆದರೆ ಆತನನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆ ಕೊಲೆಗೂ ಮತ್ತು ನನ್ನ ಗಂಡನಿಗೂ ಏನು ಸಂಬಂಧ ಎಂಬುವುದು ನನಗೆ ಗೊತ್ತಿರುವುದಿಲ್ಲ. ನನ್ನ ಗಂಡ ದೈವ ನರ್ತನ ಕೆಲಸ ಮಾಡುತ್ತಾರೆ. ಯಶವಂತನ ಕೊಲೆ ನಡೆದ ದಿನ ನನ್ನ ಗಂಡ ಎಲ್ಲಿ ಹೋಗಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

2. ದಿನಾಂಕ 02/03/2019 ರಂದು ಆರೋಪಿ ಪ್ರಾಸಾ-3 ರವರೊಂದಿಗೆ ಪ್ರಾಸಾ-6 ರವರ ಮನೆಯಲ್ಲಿ ನಡೆದ ದೈವ ನರ್ತನೆಗೆ ಹೋಗಿದ್ದು ಮರುದಿನ ದಿನಾಂಕ 03/03/2019 ರಂದು ಬೆಳಿಗ್ಗಿನ ಜಾವ ಉಪ್ಪಿನಂಗಡಿ ಕಂಬಳಕ್ಕೆ ಹೋಗಿರುವುದಾಗಿ ನಂತರ ಸುಮಾರು 7.00 ಗಂಟೆಗೆ ಬಟ್ಟೆ ಬದಲಾಯಿಸಿ ಅವರ ಗ್ರೇ ಬಣ್ಣದ ಬ್ಯಾಗನ್ನು ಕೋಣೆಯಲ್ಲಿ ಇರಿಸಿ ಬಂಟ್ವಾಳ ಕಡೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ಗಂಡ ಹಣಕ್ಕಾಗಿ ಯಶವಂತನನ್ನು ದೈವನರ್ತನ ಸಮಯದಲ್ಲಿ ಬಳಸುವ ಚೂರಿಯಿಂದ ಇರಿದು ಕೊಲೆ ಮಾಡಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿಯು ನನ್ನ ಗಂಡನಾಗಿರುವುದರಿದ ಆತನೇ ನನ್ನ ತಮ್ಮ ಯಶವಂತನನ್ನು ಕೊಲೆ ಮಾಡಿದ್ದರೂ ಸಹ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಈ ದಿನ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಜಿ.ಎನ್. ವಕೀಲರಿಂದಃ

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.)

ಮರುವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.